

# ❋ ಶ್ರೀರಾಮಕೃಷ್ಣ ಲೀಲಾಸ್ಥಾನಗಳ ಸಚಿತ್ರ ಯಾತ್ರೆ ❋


ಕಾಮಾರಪುಕುರ




ಶ್ರೀರಾಮಕೃಷ್ಣರು ಮಲಗುತ್ತಿದ್ದ ಕೊಠಡಿಯ ಒಳಗಿನ ದೃಶ್ಯ. ಈಗ ಇಲ್ಲಿ ಶ್ರೀರಾಮಕೃಷ್ಣರ ಚಿತ್ರವನ್ನು ಇಡಲಾಗಿದೆ.



**ಶ್ರೀರಾಮಕೃಷ್ಣರ ಹಳ್ಳಿಯ ಮನೆಯ ಮೊಗಸಾಲೆ**
(ಶ್ರೀರಾಮಕೃಷ್ಣರು ತಮ್ಮ ಸ್ನೇಹಿತರು ಮತ್ತು ಇತರ ಅತಿಥಿಗಳನ್ನು ಭೇಟಿಮಾಡುತ್ತಿದ್ದ ಸ್ಥಳ.)




**ಲಾಹಾ ಕುಟುಂಬದ ವಿಷ್ಣುಮಂದಿರ**
(ಬಾಲಕ ಗದಾಧರ ಇಲ್ಲಿನ ಆವರಣದಲ್ಲಿ ಮಣ್ಣಿನಿಂದ ಸುಂದರ ಪ್ರತಿಮೆಗಳನ್ನು ತಯಾರಿಸುತ್ತಿದ್ದ.)



**ಚಿನು ಶಾಂಖರಿಯ ಸ್ಥಳ**

(ಚಿನು ಅಥವಾ ಶ್ರೀನಿವಾಸನೆಂಬುವನು ಅತ್ಯಂತ ಬಡವ. ಬಾಲಕ ಗದಾಧರನು ಭಗವಂತನ ಅವತಾರವೆಂದು ಮೊಟ್ಟಮೊದಲು ಗುರುತಿಸಿ, ಹೂವು-ಗಂಧ-ನೈವೇದ್ಯಗಳಿಂದ ಪೂಜಿಸಿದ ಶ್ರದ್ಧಾವಂತ ಭಕ್ತ. ಆತನ ಮನೆಯ ಅವಶೇಷ. ಇಲ್ಲೇ ಅವನು ಗದಾಧರನನ್ನು ಪೂಜಿಸಿದ್ದು.)



**ಗೋಪೇಶ್ವರ ಶಿವನ ಮಂದಿರ**

(ಇದು ಲಾಹಾರವರ ಮಂದಿರದ ಸಮೀಪದಲ್ಲಿಯೇ ಇರುವ ಮಂದಿರ. ಶ್ರೀರಾಮಕೃಷ್ಣರಿಗೆ ಹುಚ್ಚುಹಿಡಿದಿದೆ ಎಂಬ ವರ್ತಮಾನ ಬಂದಾಗ ತಾಯಿ ಚಂದ್ರಮಣಿದೇವಿ ಇಲ್ಲಿ ವ್ರತವನ್ನು ಕೈಗೊಂಡಳು. ಆಗ ಅವಳಿಗೆ ಒಂದು ದಿವ್ಯವಾಣಿ ಕೇಳಿಬಂದು, ಹತ್ತಿರದ ಮುಕುಂದಪುರದಲ್ಲಿರುವ ಶಿವನ ಉಪಾಸನೆಯನ್ನು ಮಾಡುವಂತೆ ಸೂಚನೆಯಾಯಿತು.)



**ಲಾಹಾ ಮನೆತನದ ದುರ್ಗಾ ಮಂಟಪ**

(ಬಂಗಾಳ ಪ್ರಾಂತದಲ್ಲಿ ನವರಾತ್ರಿಯ ಸಮಯದಲ್ಲಿ ದುರ್ಗಾದೇವಿಯನ್ನು ಪ್ರತಿಮೆಯಲ್ಲಿ ಆವಾಹಿಸಿ ಪೂಜಿಸುತ್ತಾರೆ. ಲಾಹಾ ಕುಟುಂಬದವರಿಗೆ ಸೇರಿದ ಈ ಮಂಟಪದಲ್ಲಿ ಬಹಳ ವರ್ಷಕಾಲ ದುರ್ಗಾಪೂಜೆ ನಡೆದುಕೊಂಡು ಬಂದಿತ್ತು. ಅದರಲ್ಲಿ ಶ್ರೀರಾಮಕೃಷ್ಣರೂ ಭಾಗವಹಿಸುತ್ತಿದ್ದರು.)